ಆರ್. ಮಧುಸೂದನ್, ಹಾಸನ

*ಮಾರ್ಜಾಲಕ್ಕೂ, ಅಂತರ್ಜಾಲಕ್ಕೂ ಏನು ವ್ಯತ್ಯಾಸ?*



ಅಂತರ್ಜಾಲ ಎಂದರೆ ಇಂಟರ್‌ನೆಟ್; ಮಾರ್ಜಾಲ ಎಂದರೆ ಮಾರ್ ಜಾಲ ಅರ್ಥಾತ್ **net marketing!**

ಎಚ್. ಮನೋಹರ್, ಉದ್ಯಾವರ

*ಹಲೋ ರಾಂ, ನೀವು ಬೆಳಿಗ್ಗೆ 'ರಾಮ' ದಾಸನಂತೆ, ಸಾಯಂಕಾಲ 'ರಂ' ದಾಸನಂತೆ, ರಾತ್ರಿ 'ರಮಾ' ದಾಸನಂತೆ. ಹೌದೆ?*

ಅರೆರೆ! ತಿಳಿದೇಬಿಟ್ಟರೇ! ಕೊಂಚ ವ್ಯತ್ಯಾಸವಷ್ಟೆ – ರಾಮು, ರಂ, ರಮಾ – ರಾಗಿಮುದ್ದೆ, ರಂಗನಾಟಕ, ರಸಪುರಿ ಮಾವಿನಹಣ್ಣಿನ ದಾಸ!

ವಿಶಾಲಾಕ್ಷಿ, ಬ್ರಹ್ಮಾವರ

*ಅಕ್ರಮ, ಅನ್ಯಾಯ, ಅನಾಚಾರವೆಸಗಿ, ಸಾಚಾಗಳೆಂದು ಹೇಳಿಕೊಳ್ಳುವರನ್ನು ಸೀತೆಯಂತೆ ಅಗ್ನಿಪರೀಕ್ಷೆಗೆ ಗುರಿಪಡಿಸಿದರೆ ಏನಾಗಬಹುದು?*

ಬೆಂಕಿ ಆರುವವರೆಗೆ ಆರೋಪಿಗಳೆಲ್ಲ ಇದ್ದಕ್ಕಿದ್ದಂತೆ ಕಾಣೆಯಾಗಬಹುದು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

*ಟ್ರೈನಿಂಗ್ ಇಲ್ಲದೆಯೇ ಓಡಿಸುವ ಗಾಡಿ ಯಾವುದು?*



ಓಡಿಸುವ ರೀತಿಯನ್ನು ನೋಡಿದರೆ – ಆಟೋಗಳೇ ಇರಬೇಕು!

ದಾದಾಪೀರ್, ಹೂವಿನಹಡಗಲಿ

*ಲೋಕಸಭಾ ಚುನಾವಣೆಯಲ್ಲಿ ಗಂಗೆಯನ್ನು, ದೆಹಲಿ ಚುನಾವಣೆಯಲ್ಲಿ ಯಮುನೆಯನ್ನು ಶುದ್ಧೀಕರಿಸಲು ಹೊರಟ ರಾಜಕಾರಣಿಗಳು ತಮ್ಮ ಕೊಳಕು ಮನಸ್ಸುಗಳನ್ನು ಎಂದು ಶುದ್ಧೀಕರಣ ಮಾಡುತ್ತಾರೆ?*

ಅದನ್ನೇಕೆ ಶುದ್ಧೀಕರಣ ಮಾಡಿಯಾರು ಬಿಡಿ; ಎಮ್ಮೆಗೆ ಕೆಸರು, ಹಂದಿಗೆ ತಿಪ್ಪೆಯಂತೆ ಅವರ ಮನಕ್ಕೆ ಕೊಳಕೇ ಭೂಷಣ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಇಂದಿನ ವೈದ್ಯರಿಗೂ, ಹಿಂದಿನ ವೈದ್ಯರಿಗೂ ಏನು ವ್ಯತ್ಯಾಸ ರಾಮ್‌ಜಿ?*

ಹಿಂದಿನ ವೈದ್ಯರು ವೈದ್ಯರು; ಇಂದಿನ ವೈದ್ಯರು ವ್ಯಾಪಾರಿಗಳು.

ಎಚ್.ಆರ್. ದೇಸಾಯಿ, ರಾಯಚೂರು

*ತಾವು ಇತ್ತೀಚಿನ ದಿನಗಳಲ್ಲಿ ಓದಿದ, ಕೇಳಿದ, ನೋಡಿದ ಒಳ್ಳೆಯ ಸುದ್ದಿ ಯಾವುದು?*

ಯೆಮನ್(ಯಮ)ನಿಂದ ಭಾರತೀಯರನ್ನೂ, ವಿದೇಶೀಯರನ್ನೂ ರಕ್ಷಿಸಿ, ಭಾರತ 'ಮೇರಾ ಭಾರತ್ ಮಹಾನ್' ಎನಿಸಿಕೊಂಡದ್ದು.

ಅನಂತಪದ್ಮನಾಭ ಹೆಚ್.ಎಂ. ಮೈಸೂರು

*ನಿದ್ದೆಗೂ, ನಿಂದೆಗೂ ಇರುವ ಸಾಮ್ಯತೆಯೇನು?*

ಎರಡೂ ವಿದ್ಯಾರ್ಥಿಗಳನ್ನೇ ಕಾಡುವಂತಹದ್ದು – ಎಕ್ಸಾಮ್ ಟೈಮಲ್ಲಿ ನಿದ್ದೆ, ರಿಸಲ್ಟ್ ಟೈಮಲ್ಲಿ ನಿಂದೆ.

ಎಂ.ಎ. ಕುಮಾರ್, ಬೆಂಗಳೂರು

*ಒಂದೇ ಕನ್ನಡಿ, ಒಂದೇ ಜಾಗ. ಒಬ್ಬಳು ಸುರಸುಂದರಿ, ಮತ್ತೊಬ್ಬಳು ಕುರೂಪಿ. ಹೇಗೆ ಹಂಚಿಕೊಳ್ಳುತ್ತಾರೆ?*

ಏಕೆ ಹಂಚಿಕೊಳ್ಳಬೇಕು? ಸುರಸುಂದರಿಗೆ ಅಗತ್ಯವಿಲ್ಲ, ಕುರೂಪಿಗೆ ಉಪಯೋಗವಿಲ್ಲ!

ಬಿ. ಚಂದ್ರೇಗೌಡ, ಬೆಂಗಳೂರು

*ಇರಲಾರದೆ ಇರುವೆ ಬಿಟ್ಕೊಳ್ಳೋದು ಅಂದ್ರೆ?*

ರಿಟೈರಾಗಿ ಮನೆಯಲ್ಲಿರುವ ವಾಚಾಳಿ ಪ್ರೊಫೆಸರನ್ನು 'ಏನ್ಸಾರ್ ಸಮಾಚಾರ' ಎಂದು ಮಾತನಾಡಿಸುವುದು!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಪ್ರಾಣಿ ದಯಾ ಸಂಘಟನೆಯ ಮಹಿಳಾ ಕಾರ್ಯಕರ್ತರು ಅರೆ ಬೆತ್ತಲೆಯಾಗಿಯೇ ಏಕೆ ಪ್ರತಿಭಟಿಸುತ್ತಾರೆ?*

ಯಾವುದೇ ಪ್ರತಿಭಟನೆಯ ಉದ್ದೇಶ ಗಮನ ಸೆಳೆಯುವುದು. ಇದಕ್ಕಿಂತಲೂ ಗಮನ ಸೆಳೆಯುವುದು ಜಗದಲ್ಲೇ ಯಾವುದೂ ಇಲ್ಲವಲ್ಲ!

ಎಚ್.ಜಿ. ಜಗದೀಶ್, ಮೈಸೂರು

*ಅವನದು ಛತ್ರಿ ಬುದ್ಧಿ ಎನ್ನುತ್ತಾರಲ್ಲ, ಹಾಗೆಂದರೇನು?*

ಮೂರು ಛ ಗಳ ಬುದ್ಧಿ ಹೊಂದಿದ್ದಾನೆಂದು – ಛಲ, ಛಡಾಳತೆ(ಚುರುಕಾದ), ಛದ್ಮವೇಷ.

## ಬಹುಮಾನಿತ ಪ್ರಶ್ನೆ

ವೈ.ಜಿ. ನರಸಿಂಹನ್, ಶಿವಮೊಗ್ಗ

*ನಾನೊಬ್ಬ ತಮಿಳು ಕನ್ನಡಿಗ. ನನಗೆ ಕನ್ನಡ ಭಾಷೆಯ ಬಗ್ಗೆ ಬಹಳ ಅಭಿಮಾನ. ಆದರೆ ಕರ್ನಾಟಕದ ಕನ್ನಡಿಗರಿಗೇಕೆ ಭಾಷಾಭಿಮಾನವಿಲ್ಲ?*

ನೀವು ತಮಿಳ್ಗನ್ನಡಿಗರಾದ್ದರಿಂದಲೇ ಕನ್ನಡದ ಮೇಲೆ ಅಷ್ಟು ಅಭಿಮಾನ. ಕನ್ನಡದ ಕನ್ನಡಿಗರಾಗಿದ್ದಿದ್ದರೆ ಅಷ್ಟು ಅಭಿಮಾನ ಇರುತ್ತಿರಲಿಲ್ಲ.

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ

*ಆಲಿಂಗನ, ಅಪ್ಪುಗೆ ಒಳ್ಳೆಯದು ಎಂಬ ವಿಜ್ಞಾನಿಗಳ ಮಾತನ್ನು ನಿರೂಪಿಸಲು ಹೊರಟರೆ?*

'ಶರೀರದ ಮೇಲೆ ವಿವಿಧ ರೀತಿಯ ಹೊಡೆತಗಳ ಪರಿಣಾಮ' ಎಂಬುದರ ಬಗ್ಗೆ ಥೀಸೀಸ್ ಬರೆಯಬಹುದು.

ವಿ. ಹೇಮಂತ ಕುಮಾರ್, ಬೆಂಗಳೂರು

*ಹೆಣ್ಮಕ್ಳು ವಾರೆಗಣ್ಣಿಂದ ನೋಡ್ತಾರೆ. ಏಕೆ?*



ಹುಡುಗ ವಾರೆವಾಹ್ ಅನ್ನೋತರಹ ಇದಾನೋ ಇಲ್ವೋ ಅಂತ ನೋಡಕ್ಕೆ.

ಜಯದೇವ. ಹಲಕಿ, ಗೋಕಾಕ

*ತಂದೆ ತಾಯಿಯೇ ದೇವರು. ನೀವೇನಂತೀರಿ ಸರ್?*

ಅರ್ಧ ನಿಜ. ಗಂಡು ಒಪ್ಪುತ್ತಾನೆ. ಆದರೆ ಹೆಣ್ಣು 'ಹೌದು. ಆದರೆ ನಿಮ್ಮ ತಂದೆ ತಾಯಿಯಲ್ಲ' ಎನ್ನುತ್ತಾಳೆ!

ಡ್ರೈ ವಿಶ್ವನಾಥ್, ಬೆಂಗಳೂರು

*ಹಾಸ್ಯ, ಜೋಕ್ ಹಳೆಯದಾಗಲ್ವಾ?*

ಆಗಲಿ ಬಿಡಿ. ಬ್ರೆಡ್‌ನಂತೆ ಸ್ಟೇಲ್ ಆದುದನ್ನು ಬಿಸಾಡಿ, ವೈನ್‌ನಂತೆ ಕಿಕ್ ಕೊಡುವುದನ್ನು ಕಾಪಾಡಿ.

ಜಾಕೋಬ್ ಡಿಸೋಜ, ಕುರುವಳ್ಳಿ

*ಸತ್ಯ ಯಾವಾಗಲೂ ಕಹಿ ಅಂತಾರೆ. ಯಾಕೆ?*

ಸುಳ್ಳನ್ನು ನಂಬಿದವರಿಗೆ 'ಅದು ಹಾಗಲ್ಲ ಕಣೋ' ಎನ್ನುತ್ತೇವಲ್ಲಾ, 'ಹಾಗಲ್ಲ'ದಲ್ಲಿ ಹಾಗಲ ಇರುವುದರಿಂದ ಕಹಿ!

■ ರಾಮ್